| Published Date: | 22 Jul 2018 | Publication: | Vijayavani Kannada Daily (Kannada) |
|---|---|---|---|
| Edition: | Bangalore | Page No: | 4 |
| MAV/CCM: | 72144/20.04 | Circulation: | 253101 |

# ಆ.7ಕ್ಕೆ ಟಿಸಿಎಸ್ ಐಟಿ ಕ್ವಿಜ್

**ಬೆಂಗಳೂರು:** ಟಿಸಿಎಸ್ ಐಟಿ ವಿಜ್-2018ರ ಬೆಂಗಳೂರು ಆವೃತ್ತಿಯ ಟೆಕ್ನಾಲಜಿ ಕ್ವಿಜ್‌ಅನ್ನು ಆ.7ರಂದು ವಯ್ಯಾಲಿಕಾವಲಿನ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಲಾಗಿದೆ.

8ರಿಂದ 12ನೇ ತರಗತಿ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದು, ಪ್ರತಿ ಸಂಸ್ಥೆಯು ತಲಾ 10 ತಂಡಗಳನ್ನು (ಪ್ರತಿ ತಂಡಕ್ಕೆ 2 ಸದಸ್ಯರು) ಕಳುಹಿಸಬಹುದು. ಪ್ರವೇಶ ಶುಲ್ಕ ಇಲ್ಲ. ಬೆಂಗಳೂರು ಸೇರಿ ದೇಶದ 12 ಸ್ಥಳಗಳಲ್ಲಿ ಟಿಸಿಎಸ್ ಐಟಿ ವಿಜ್ ನಡೆಯಲಿದೆ. ಪ್ರವೇಶಗಳನ್ನು ಆಯಾ ಸಂಸ್ಥೆಗಳ ಮೂಲಕ ಆ.2ರೊಳಗೆ ಕ್ವಿಜ್ ಸಂಯೋಜಕರು, ಟಿಸಿಎಸ್ ಐಟಿ ವಿಜ್, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಎಸ್‌ಜೆಎಂ ಟವರ್, ನಂ.18, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂ-09 ಇಲ್ಲಿಗೆ ಕಳುಹಿಸಬೇಕು. **www. tcsitwiz.com** ವೆಬ್‌ಸೈಟ್‌ನಲ್ಲೂ ನೊಂದಾಯಿಸಿಕೊಳ್ಳಬಹುದು. ಮಾಹಿತಿಗೆ ದೂ: 080-67246000ಕ್ಕೆ ಸಂಪರ್ಕಿಸಿ.

**TCS IT Wiz**

**8ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಅವಕಾಶ**

**ಆನ್‌ಲೈನ್‌ನಲ್ಲೂ ನೋಂದಣಿ ಮಾಡಿ ಕೊಳ್ಳಬಹುದು**

**ಆಯ್ಕೆ ವಿಧಾನ:** ಲಿಖಿತ ಪ್ರಾಥಮಿಕ ಸುತ್ತಿನ ಸ್ಪರ್ಧೆಗಳಲ್ಲಿ ಉನ್ನತ 6 ಸ್ಥಾನ ಗಳಿಸುವ ತಂಡಗಳು ಪ್ರಾದೇಶಿಕ ಹಂತದ ಸ್ಪರ್ಧೆಗೆ ಪ್ರವೇಶ ಪಡೆಯಲಿವೆ. ಪ್ರಾದೇಶಿಕ ಸುತ್ತಿನಲ್ಲಿ ಗೆದ್ದ ತಂಡಗಳು ರಾಷ್ಟ್ರೀಯ ಮಟ್ಟದ ಅಂತಿಮ ಸುತ್ತಿನ ಸ್ಪರ್ಧೆಗೆ ಆಯ್ಕೆಯಾಗಲಿವೆ. ಪ್ರಾದೇಶಿಕ ಸುತ್ತಿನಲ್ಲಿ ಗೆದ್ದ ತಂಡಗಳಿಗೆ 60 ಸಾವಿರ ರೂ. ಗಿಫ್ಟ್ ಮತ್ತು ರನ್ನರ್‌ಅಪ್ ತಂಡಗಳಿಗೆ 40 ಸಾವಿರ ರೂ. ಮೌಲ್ಯದ ಗಿಫ್ಟ್ ವೋಚರ್ ಸಿಗಲಿದೆ.

1/1